# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ರಾಜ್ಯದ ಈಶಾನ್ಯ ಭಾಗದಲ್ಲಿರುವ ಶೈಕ್ಷಣಿಕವಾಗಿ ಹಿಂದುಳಿದ ಏಳು ಜಿಲ್ಲೆಗಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿ ಈ ಜಿಲ್ಲೆಗಳಲ್ಲಿ ಮಧ್ಯಾಹ್ನ ಬಿಸಿ ಊಟ ಒದಗಿಸುವ ಕಾರ್ಯಕ್ರಮ ಜಾರಿಗೊಳಿಸುವ ಬಗ್ಗೆ.

ಓದಲಾಗಿದೆ :- 1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : ಎಫ್. 6-7 : 95-ಡೆಸ್ಕ್(ಇಇ) ದಿನಾಂಕ : 12.8.95.

2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ : ಎಂ. 3: ಎಂ ಎಂ ಎಸ್. 2: 2001-002, ದಿನಾಂಕ : 6.8.2001:

ಪೀಠಿಕೆ :-

ಓದಲಾಗಿದೆ (1) ರಲ್ಲಿ ಕೇಂದ್ರ ಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಠಿಕ ನೆರವು ನೀಡುವ ರಾಷ್ಟ್ರೀಯ ಕಾರ್ಯಕ್ರಮ ಯೋಜನೆಯಡಿ 1 ರಿಂದ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಶಾಲಾ ಮಕ್ಕಳಿಗೆ ಪ್ರತಿ ತಿಂಗಳು 3 ಕೆ.ಜಿ. ಅಕ್ಕಿ : ಗೋಧಿಯನ್ನು ಪ್ರತಿ ಮಗುವಿಗೆ ವಿತರಿಸುವ ಕಾರ್ಯಕ್ರಮವನ್ನು ದಿನಾಂಕ : 15.8.1995 ರಿಂದ ಜಾರಿಗೆ ತಂದಿದೆ. ಈ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಯನ್ವಯ ಕ್ರಮೇಣವಾಗಿ 3 ಕೆ.ಜಿ. ಆಹಾರಧಾನ್ಯವನ್ನು ನೀಡುವ ಪದ್ಧತಿಯನ್ನು ಈ ಯೋಜನೆಯನ್ನು ಪ್ರಾರಂಭಿಸಿದ ದಿನಾಂಕದಿಂದ ಎರಡು ವರ್ಷದ ಒಳಗಾಗಿ ಸಿದ್ಧಪಡಿಸಿದ ಆಹಾರವನ್ನಾಗಿ ಪರಿವರ್ತಿಸಿ ಅಂದರೆ ಬಿಸಿ ಊಟವನ್ನು ಶಾಲಾ ಮಕ್ಕಳಿಗೆ ನೀಡುವಂತೆ ಸೂಚಿಸಿದೆ. ಮುಂದುವರೆದಂತೆ ರಾಜ್ಯ ಸರ್ಕಾರವು ನೇಮಿಸಿದ ಶಿಕ್ಷಣ ಇಲಾಖೆಯ ಕಾರ್ಯಾಚರಣೆ ಪಡೆಯು ಕೂಡ ಸಲ್ಲಿಸಿದ ಮಧ್ಯಂತರ ವರದಿಯಲ್ಲಿ ಈಗಿನ ಪದ್ಧತಿಯಂತೆ ಆಹಾರ ಧಾನ್ಯಗಳನ್ನು ನೀಡುವ ಬದಲಿಗೆ ಸಿದ್ಧಪಡಿಸಿದ ಮಧ್ಯಾಹ್ನ ಉಪಹಾರವನ್ನು ಗ್ರಾಮ ಪಂಚಾಯಿತಿಗಳು ಅಥವಾ ಯುವಕ ಮಂಡಲಿಗಳಂತಹ ಸರ್ಕಾರೇತರ ಸಂಸ್ಥೆಗಳ ಮೂಲಕ ಒದಗಿಸುವಂತೆ ಶಿಫಾರಸ್ಸು ಮಾಡಿರುತ್ತದೆ.

ಕೇಂದ್ರ ಸರ್ಕಾರವು ನೀಡಿರುವ ಮಾರ್ಗಸೂಚಿಯನ್ವಯ ಮತ್ತು ಶಿಕ್ಷಣ ಕಾರ್ಯಾಚರಣೆ ಪಡೆಯು ತನ್ನ ಮಧ್ಯಂತರ ವರದಿಯಲ್ಲಿ ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಮೇಲೆ ಓದಲಾದ (2) ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಪ್ರಾರಂಭಿಕವಾಗಿ ರಾಜ್ಯದ ಈಶಾನ್ಯ ಭಾಗದಲ್ಲಿರುವ ಶೈಕ್ಷಣಿಕವಾಗಿ ಅತಿ ಹಿಂದುಳಿದ 7 ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಬೀದರ್, ಬಳ್ಳಾರಿ, ಬಿಜಾಪುರ ಮತ್ತು ಬಾಗಲಕೋಟೆಗಳಲ್ಲಿ ಮಧ್ಯಾಹ್ನ ಬಿಸಿ ಊಟವನ್ನು ಒದಗಿಸಲು ಸಲಹೆ ಮಾಡಿದ್ದು, ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಒಟ್ಟಾರೆ ರೂ. 55.89 ಕೋಟಿಗಳನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಈ ಪ್ರಸ್ತಾವನೆಯಲ್ಲಿ ಮಕ್ಕಳ ಬಲವರ್ಧನೆಗಾಗಿ ಕಬ್ಬಿಣ ಅಂಶರವಿರುವ ಮಾತ್ರೆಗಳು, ಡಿ ವರ್ಮಿಂಗ್ + ವಿಟಮಿನ್ ಎ ಮಾತ್ರೆಗಳನ್ನು ನೀಡುವ ಕಾರ್ಯಕ್ರಮವು ಸಹ ಒಳಗೊಂಡಿರುತ್ತದೆ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

## ಸರ್ಕಾರಿ ಆದೇಶ ಸಂಖ್ಯೆ ಇಡಿ 20 ಎಂ ಎಂ ಎಸ್ 2000 (ಭಾ), ಬೆಂಗಳೂರು, ದಿ: 1-10-2001

ರಾಜ್ಯದ ಈಶಾನ್ಯ ಭಾಗದಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರುವ 7 ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಬೀದರ್, ಬಳ್ಳಾರಿ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿನ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 5ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಶಾಲಾ ಮಕ್ಕಳಿಗೆ ಮಧ್ಯಾಹ್ನ ಉಪಹಾರ ಯೋಜನೆಯಡಿ ಬಿಸಿ

--2-

ಬಳಗಿಸುವ ಕಾರ್ಯಕ್ರಮವನ್ನು ದಿನಾಂಕ 2ನೇ ಅಕ್ಟೋಬರ್ 2001 ರಿಂದ ಜಾರಿಗೊಳಿಸಲು ಮಂಜೂರಾತಿ ನೀಡಲಾಗಿದೆ.

ಮಕ್ಕಳ ಬಲವರ್ಧನೆಗಾಗಿ ಕಬ್ಬಿಣದ ಅಂಶವಿರುವ ಮಾತ್ರೆಗಳು, ಡಿ ವರ್ಮಿಂಗ್ + ವಿಟಮಿನ್ ಎ ಮಾತ್ರೆಗಳನ್ನು ನೀಡುವ ಕಾರ್ಯಕ್ರಮಕ್ಕೂ ಮಂಜೂರಾತಿಯನ್ನು ನೀಡಿದೆ.

ಈ ಕಾರ್ಯಕ್ರಮಕ್ಕಾಗಿ ಪ್ರಾರಂಭಿಕವಾಗಿ ರೂ. 15.00 ಕೋಟಿ ( ರೂಪಾಯಿ ಹದಿನೈದು ಕೋಟಿಗಳು ಮಾತ್ರ) ಗಳನ್ನು ಸಹ ಬಿಡುಗಡೆ ಮಾಡಲು ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಈ ಹಣವನ್ನು ಈ ಕೆಳಕಂಡ 7 ಜಿಲ್ಲೆಗಳಿಗೆ ಹಂಚಿಕೆ ಮಾಡಲಾಗುವುದು.

| | | | | |
|---|---|---|---|---|
| 1. | ಕೊಪ್ಪಳ | ರೂ. | 143.26 | ಲಕ್ಷಗಳು |
| 2. | ರಾಯಚೂರು | ರೂ. | 185.95 | ಲಕ್ಷಗಳು |
| 3. | ಬಳ್ಳಾರಿ | ರೂ. | 214.57 | ಲಕ್ಷಗಳು |
| 4. | ಗುಲ್ಬರ್ಗಾ | ರೂ. | 367.23 | ಲಕ್ಷಗಳು |
| 5. | ಬೀದರ್ | ರೂ. | 159.71 | ಲಕ್ಷಗಳು |
| 6. | ಬಿಜಾಪುರ | ರೂ. | 238.99 | ಲಕ್ಷಗಳು |
| 7. | ಬಾಗಲಕೋಟೆ | ರೂ. | 190.29 | ಲಕ್ಷಗಳು |
| | | ರೂ. | 1500.00 | ಲಕ್ಷಗಳು |

ಈ ಕಾರ್ಯಕ್ರಮಕ್ಕಾಗಿ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2202-01-800-1-14-373 (ಯೋಜನೆ) ಅಡಿಯಲ್ಲಿ ಭರಿಸತಕ್ಕದ್ದು. ಈ ವೆಚ್ಚವು ಹೊಸ ಸೇವೆಗಳಡಿ ಬರುವುದರಿಂದ ರೂ. 15.00 ಕೋಟಿಗಳನ್ನು ಸಾದಿಲ್ವಾರು ನಿಧಿಯಿಂದ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯು ಕ್ರಮ ಕೈಗೊಳ್ಳುವುದು.

ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಕೆಳಕಂಡ ಮಾರ್ಗ ಸೂಚಿಯನ್ನು ನೀಡಿದೆ.

1) ರಾಜ್ಯದ ಅತಿ ಹಿಂದುಳಿದ 7 ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಬೀದರ್, ಬಳ್ಳಾರಿ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಮಾತ್ರ ಅನುಷ್ಠಾನಗೊಳಿಸತಕ್ಕದ್ದು. ಮೊದಲಿಗೆ ಈ ಯೋಜನೆಯನ್ನು ಮುಂದಿನ 3 ತಿಂಗಳಿಗೆ ಮಾತ್ರ ಸೀಮಿತಗೊಳಿಸತಕ್ಕದ್ದು.

2) ಈ ಯೋಜನೆ ಹೇಗೆ ನಡೆಯುತ್ತದೆ ಎಂಬ ಬಗ್ಗೆ ಡಿಸೆಂಬರ್ ತಿಂಗಳಲ್ಲಿ ಪರಾಮರ್ಶೆ ಮಾಡತಕ್ಕದ್ದು. ನಂತರ ಈ ಯೋಜನೆಯನ್ನು ಮುಂದುವರೆಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

3) ಈ ಯೋಜನೆಯನ್ನು ಶಿಕ್ಷಣ ಇಲಾಖೆಯ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳು, ಉಪ ಆಯುಕ್ತರು ಹಾಗೂ ತಹಸೀಲ್ದಾರ್‌ರವರ ಸಹಕಾರದೊಂದಿಗೆ ಗ್ರಾಮ ಪಂಚಾಯಿತ್‌ಗಳ / ನಗರಪಾಲಿಕೆಗಳ ಮೂಲಕ ಅನುಷ್ಠಾನಗೊಳಿಸತಕ್ಕದ್ದು.

4) ಈ ಕಾರ್ಯಕ್ರಮಗಳ ವೆಚ್ಚದ ಬಗ್ಗೆ ಸಮರ್ಪಕ ಲೆಕ್ಕಪತ್ರವನ್ನು ಸಂಬಂಧಪಟ್ಟವರು ಇಡತಕ್ಕದ್ದು.

5) ಅಡಿಗೆಮನೆ ನಿರ್ಮಾಣದ ಬಗ್ಗೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ನೀಡಲಾಗುವ ಅನುದಾನದ ವತಿಯಿಂದಲೇ ನಿರ್ಮಿಸಲು ಕ್ರಮ ಕೈಗೊಳ್ಳತಕ್ಕದ್ದು.

6) ಈ ಯೋಜನೆಯನ್ನು ರಾಜ್ಯ, ಜಿಲ್ಲಾ, ತಾಲ್ಲೂಕು ಮತ್ತು ಪಂಚಾಯಿತಿಗಳ ಮೂಲಕ ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳುವುದು.

ಎ) ರಾಜ್ಯಮಟ್ಟದ ಅಧಿಕಾರಿಗಳ ಕರ್ತವ್ಯಗಳು

ರಾಜ್ಯಮಟ್ಟದಲ್ಲಿ ಶಿಕ್ಷಣ ಇಲಾಖೆಯು ಹಣವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವುದು. ಪ್ರತಿಯಾಗಿ ಇದನ್ನು ಜಿಲ್ಲಾಧಿಕಾರಿಗಳು ಇದನ್ನು ಉಸ್ತುವಾರಿ ಮತ್ತು ಸಮನ್ವಯ ಮಾಡುವುದು. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯು ಅಡಿಗೆ ಪರಿಕರಗಳು ಎಂದರೆ ಬೇಳೆ, ಎಣ್ಣೆ ಉಪ್ಪು ಇತ್ಯಾದಿಗಳನ್ನು ಸಂಗ್ರಹಿಸಿ ಅವುಗಳನ್ನು ವಿತರಿಸುವ ಕಾರ್ಯವನ್ನು ಹಾಗೂ ಭಾರತ ಆಹಾರ ನಿಗಮದಿಂದ ಆಹಾರ ಧಾನ್ಯವನ್ನು ಎತ್ತುವಳಿ ಮಾಡುವ ಮತ್ತು ವಿತರಣಾ ಕಾರ್ಯವನ್ನು ನಿರ್ವಹಿಸುವುದು.

ಬಿ) ಜಿಲ್ಲಾ ಮಟ್ಟದ ಅಧಿಕಾರಿಗಳ ಕರ್ತವ್ಯಗಳು

ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಆಹಾರ ಇಲಾಖೆಯ ಉಪನಿರ್ದೇಶಕರ ಸಹಾಯದಿಂದ ಆಹಾರ ಧಾನ್ಯವನ್ನು ಭಾರತ ಆಹಾರ ನಿಗಮದಿಂದ ಎತ್ತುವಳಿ ಮಾಡಿ ತಾಲ್ಲೂಕು ಗೋದಾಮುಗಳಿಗೆ ಸಾಗಿಸುವ ಜವಾಬ್ದಾರಿ ಹೊಂದಿರುತ್ತಾರೆ. ಅಡಿಗೆ ಪರಿಕರಗಳಾದ ಧಾನ್ಯ, ಎಣ್ಣೆ, ಉಪ್ಪು ಇತ್ಯಾದಿಗಳನ್ನು ಸಹ ತಾಲ್ಲೂಕಿನಿಂದ ಶಾಲೆಗಳಿಗೆ ವಿತರಿಸಲು ಜವಾಬ್ದಾರರಾಗಿರುತ್ತಾರೆ. ಇದಲ್ಲದೆ ಗ್ರಾಮ ಪಂಚಾಯತ್ / ನಗರಪಾಲಿಕೆಗಳ ಮೂಲಕ ಮುಖ್ಯ ಅಡಿಗೆಯವರಿಗೆ ಸಂಚಿತ ನಿಧಿಯನ್ನು ಬಿಡುಗಡೆ ಮಾಡುವ ಹಾಗೂ ಅಡಿಗೆಯವರಿಗೆ ಮತ್ತು ಸಹಾಯಕರಿಗೆ ಗೌರವ ಧನ ಪಾವತಿಸುವ ಜವಾಬ್ದಾರಿ ಹೊಂದಿರುತ್ತಾರೆ. ಅಡಿಗೆ ಕೇಂದ್ರಗಳಿಗೆ ನೀರಿನ ಟ್ಯಾಂಕ್ ಒದಗಿಸುವುದು, ಪಾತ್ರೆ, ತಕ್ಕಡಿ, ಗ್ಯಾಸ್ ಸ್ಟೌವ್ ( ಗ್ಯಾಸ್ ಸಿಲಿಂಡರ್ ) ಇತ್ಯಾದಿಗಳನ್ನು ಇವರು ನಿಯಮಗಳನ್ನು ಪಾಲಿಸಿ ಖರೀದಿಸಿ ಒದಗಿಸುತ್ತಾರೆ. ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಯೋಜನೆಯಡಿ ಪ್ರತಿ ಶಾಲೆಗೆ ಅಡಿಗೆ ವಿಭಾಗ ನಿರ್ಮಿಸುವುದು ಮತ್ತು ಅಡಿಗೆ ಕೇಂದ್ರಗಳಿಗೆ ನೀರು ಸರಬರಾಜು ವ್ಯವಸ್ಥೆ ಮಾಡುವುದು ಜಿಲ್ಲಾ ಪಂಚಾಯತ್‌ನ ಜವಾಬ್ದಾರಿಯಾಗಿರುತ್ತದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಜಿಲ್ಲಾ ಮಟ್ಟದಲ್ಲಿ ಆಹಾರ ಎತ್ತುವಳಿಗಾಗಿ ಜಿಲ್ಲಾಧಿಕಾರಿಗಳಿಗೆ ಬೇಡಿಕೆ ಸಲ್ಲಿಸುತ್ತಾರೆ. ಮತ್ತು ಫಲಾನುಭವಿಗಳ ಬಗ್ಗೆ ಮಾಹಿತಿ ಒದಗಿಸುತ್ತಾರೆ; ಹಾಗೂ ಜಿಲ್ಲಾಧಿಕಾರಿಗಳ ಸಮ್ಮತಿಯೊಂದಿಗೆ ಬಳಕೆ ಪ್ರಮಾಣ ಪತ್ರಗಳನ್ನು ರಾಜ್ಯಮಟ್ಟದ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಾಲಯಕ್ಕೆ ಒದಗಿಸುತ್ತಾರೆ.

ಸಿ) ತಾಲ್ಲೂಕು ಮಟ್ಟದ ಅಧಿಕಾರಿಗಳ ಕರ್ತವ್ಯಗಳು

ತಾಲ್ಲೂಕು ಮಟ್ಟದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಹಾಗೂ ತಾಲ್ಲೂಕು ಗೋದಾಮು ಅಧಿಕಾರಿಗಳ ಸಹಯೋಗದೊಂದಿಗೆ ತಹಶೀಲ್ದಾರವರು ತಾಲ್ಲೂಕು ಗೋದಾಮಿನಿಂದ ಶಾಲೆಗಳಿಗೆ ಆಹಾರಧಾನ್ಯ, ಅಡಿಗೆ ಪರಿಕರಗಳು, ಪಾತ್ರೆಗಳನ್ನು ಖರೀದಿಸಿ ವಿತರಿಸುವ ಹಾಗೂ ಗ್ರಾಮ ಪಂಚಾಯತ್ / ನಗರಪಾಲಿಕೆಗಳ ಮೂಲಕ ಮುಖ್ಯ ಅಡಿಗೆಯವರಿಗೆ, ಅಡಿಗೆಯವರಿಗೆ ಮತ್ತು ಸಹಾಯಕರಿಗೆ ಗೌರವ ಧನವನ್ನು ಪಾವತಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಡಿ) ಮಧ್ಯಾಹ್ನ ಉಪಹಾರ ಯೋಜನೆ ಬಗ್ಗೆ ಗ್ರಾಮ ಪಂಚಾಯಿತಿಯ ಕರ್ತವ್ಯಗಳು

1) ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮದ ಉಸ್ತುವಾರಿ ಮತ್ತು ಮೇಲ್ವಿಚಾರಣೆ ( Monitoring & Supervision )
2) ಅಡಿಗೆ ಮನೆಗಳಿಗೆ ನೀರಿನ ವ್ಯವಸ್ಥೆ ಮಾಡುವುದು.
3) ಅಡಿಗೆ ಮನೆಗಳಿಗೆ ಕಟ್ಟಡವನ್ನು ಒದಗಿಸಲು / ಕಟ್ಟಲು ಕ್ರಮ ತೆಗೆದುಕೊಳ್ಳುವುದು.

4) ಶಾಲಾ ಮಕ್ಕಳಿಗೆ ಉತ್ತಮ ಗುಣಮಟ್ಟದ ಬಿಸಿ ಆಹಾರ ಸರಬರಾಜು ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವುದು.

5) ಅಡಿಗೆ ಮನೆಯ ಸಿಬ್ಬಂದಿಯನ್ನು ಅರೆಕಾಲಿಕ ಆಧಾರದ ಮೇಲೆ ತೆಗೆದುಕೊಳ್ಳುವುದು ಮತ್ತು ಅವರ ಸಂಭಾವನೆ ಬಡವಾಡೆಯನ್ನು ಬ್ಯಾಂಕ್ ಖಾತೆ ಮೂಲಕ ಪಾವತಿಸುವುದು.

6) ಅಡಿಗೆ ಮನೆಯ ಸಿಬ್ಬಂದಿ ಕಾರ್ಯಾವರದಿಯನ್ನು ಶಾಲಾ ಕೆಲಸದ ದಿನಗಳು ಅಂದರೆ ಜೂನ್‌ನಿಂದ ಎಪ್ರಿಲ್‌ವರೆಗೆ ಮಧ್ಯಂತರ ರಜೆಯನ್ನು ಹೊರತುಪಡಿಸಿ ವರ್ಷದಲ್ಲಿ ಹತ್ತು ತಿಂಗಳಿಗೆ ಮಾತ್ರ ಸೀಮಿತಗೊಳಿಸುವುದು.

7) ಮುಖ್ಯ ಅಡಿಗೆಯವರ ಕನಿಷ್ಠ ವಿದ್ಯಾರ್ಹತೆ 7ನೇ ತರಗತಿ ತೇರ್ಗಡೆ.

8) ಮುಖ್ಯ ಅಡಿಗೆಯವರು, ಅಡಿಗೆಯವರು ಅಡಿಗೆ ಸಹಾಯಕರು ಮತ್ತು ಸಹಾಯಕರಾಗಿ ಅದೇ ಗ್ರಾಮದ 30 ವರುಷ ಮೇಲ್ಪಟ್ಟ ಹೆಂಗಸರನ್ನು ಮಾತ್ರ ತೆಗೆದುಕೊಳ್ಳುವುದು. ವಿಧವೆಯರು ಮತ್ತು ಸಂಕಷ್ಟದಲ್ಲಿರುವ ಹೆಣ್ಣು ಮಕ್ಕಳಿಗೆ ಆದ್ಯತೆ ನೀಡಬೇಕು.

9) ಮೇಲ್ಕಾಣಿಸಿದ ಮಾರ್ಗಸೂಚಿಯನ್ವಯ ಅಡಿಗೆ ಮನೆಯ ಸಿಬ್ಬಂದಿಯನ್ನು ಕೆಳಕಂಡ ಸಮಿತಿಯು ಅರೆಕಾಲಿಕ ಆಧಾರದ ಮೇಲೆ ಆಯ್ಕೆ ಮಾಡುವುದು.

1) ಗ್ರಾಮ ಪಂಚಾಯತ್ / ನಗರ ಪಾಲಿಕೆ ಅಧ್ಯಕ್ಷರು ಅಥವಾ ವಾರ್ಡ್ ಸದಸ್ಯರು.
2) ಎಸ್. ಡಿ. ಎಂ. ಸಿ. ಅಧ್ಯಕ್ಷರು.
3) ಶಾಲೆಯ ಮುಖ್ಯ ಶಿಕ್ಷಕರು.

10) ಈ ಆಯ್ಕೆಯು ಮಾರ್ಗಸೂಚಿ ಪ್ರಕಾರ ಇಲ್ಲದಿದ್ದರೆ ಆಯ್ಕೆಯನ್ನು ರದ್ದುಪಡಿಸಲು ತಹಸೀಲ್ದಾರ್‌ರವರಿಗೆ ಅಧಿಕಾರಿ ನೀಡಿದೆ.

11) ಅಡಿಗೆ ಮಾಡುವ ಸಿಬ್ಬಂದಿಗೆ ಈ ಮಾದರಿಯಲ್ಲಿ ಸಂಭಾವನೆ ನೀಡತಕ್ಕದ್ದು.

ಮಾದರಿ - ಎ : 70 ವಿದ್ಯಾರ್ಥಿಗಳಿಗಿಂತ ಕಡಿಮೆ ಇರುವ ಶಾಲೆಗಳಿಗೆ

| ಸಿಬ್ಬಂದಿ | ಸಂಖ್ಯೆ | ಸಂಭಾವನೆ (ಪ್ರತಿ ಮಾಹೆಗೆ) |
|---|---|---|
| 1. ಮುಖ್ಯ ಅಡಿಗೆಯವರು | 1 | 650.00 ರೂ. ಗಳು |
| 2. ಅಡಿಗೆಯವರು | 1 | 450.00 ರೂ. ಗಳು |

ಮಾದರಿ - ಬಿ : 70ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಿಗೆ

| ಸಿಬ್ಬಂದಿ | ಸಂಖ್ಯೆ | ಸಂಭಾವನೆ (ಪ್ರತಿ ಮಾಹೆಗೆ) |
|---|---|---|
| 1. ಮುಖ್ಯ ಅಡಿಗೆಯವರು | 1 | 650.00 ರೂ. ಗಳು |
| 2. ಅಡಿಗೆಯವರು | 1 | 450.00 ರೂ. ಗಳು |
| 3. ಸಹಾಯಕರು | 1 | 300.00 ರೂ. ಗಳು |

..-5-

ಮಾದರಿ - ಸಿ : ಸೆಂಟ್ರಲ್ ಕಿಚನ್

ಒಂದೇ ಸ್ಥಳದಲ್ಲಿ 500 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇರುವ ಶಾಲೆಗಳಿಗೆ ಅಥವಾ ಒಂದಕ್ಕಿಂತ ಹೆಚ್ಚು ಇರುವ ಶಾಲೆಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ 500ಕ್ಕಿಂತ ಹೆಚ್ಚು ಇದ್ದು 1000 ದ ವರೆಗಿನ ವಿದ್ಯಾರ್ಥಿಗಳು ಇರುವಲ್ಲಿ ಸೆಂಟ್ರಲ್ ಕಿಚನ್ ಸ್ಥಾಪನೆ ಮಾಡಬಹುದು ಮತ್ತು ಅವುಗಳಿಗೆ ತೆಗೆದುಕೊಳ್ಳಬಹುದಾದ ಸಿಬ್ಬಂದಿ ವಿವರ ಈ ರೀತಿ ಇರುತ್ತದೆ.

| ಸಿಬ್ಬಂದಿ | ಸಂಖ್ಯೆ | ಸಂಭಾವನೆ ( ಪ್ರತಿ ಮಾಹೆಗೆ ) |
|---|---|---|
| 1. ಮುಖ್ಯ ಅಡಿಗೆಯವರು | 1 | 650.00 ರೂ. ಗಳು |
| 2. ಅಡಿಗೆಯವರು | 1 | 450.00 ರೂ. ಗಳು |
| 3. ಅಸಿಸ್ಟೆಂಟ್ ಕುಕ್ ಕಮ್ ಹೆಲ್ಪರ್ | 1 | 400.00 ರೂ. ಗಳು |
| 4. ಸಹಾಯಕರು | 1 | 300.00 ರೂ. ಗಳು |

ಸೆಂಟ್ರಲ್ ಕಿಚನ್‌ನಿಂದ ಶಾಲಾ ಸ್ಥಳಗಳಿಗೆ ಆಹಾರವನ್ನು ಸರಬರಾಜು ಮಾಡಲು ತಗಲುವ ಸಾಗಾಣಿಕೆ ವೆಚ್ಚವನ್ನು ಮಂಜೂರು ಮಾಡಿರುವ ಆಯವ್ಯಯದ ಮಿತಿಯಲ್ಲಿಯೇ ಭರಿಸತಕ್ಕದ್ದು.

7) ಪ್ರತಿ ಕೇಂದ್ರಕ್ಕೆ ನೀಡಬಹುದಾದ ಪಾತ್ರೆಗಳ ವಿವರಗಳನ್ನು ಈ ಕೆಳಕಂಡಂತೆ ನೀಡಿದೆ.

| ಕ್ರಮ ಸಂಖ್ಯೆ | ಪಾತ್ರೆಗಳ ವಿವರ | |
|---|---|---|
| 1) | ಅನ್ನ ಮಾಡುವ ಪಾತ್ರೆ | 1 |
| 2) | ಸಾಂಬಾರು ಮಾಡುವ ಪಾತ್ರೆ | 1 |
| 3) | ಅನ್ನದ ಚಮಚ | 4 |
| 4) | ಜಾಲರ | 2 |
| 5) | ಸೌಟು | 2 |
| 6) | ನೀರಿನ ಡ್ರಮ್- ಮುಚ್ಚಳವಿರುವುದು | 1 |
| 7) | ನೀರಿನ ಜಗ್ | 2 |
| 8) | ಬಕೆಟ್ | 2 |
| 9) | ಸ್ಟೈನ್‌ಲೆಸ್ ಸ್ಟೀಲ್ ಬಕೆಟ್ | 1 |
| 10) | ಅಲ್ಯುಮಿನಿಯಂ ಕಂಟೈನರ್ | 1 |
| 11) | ಆಯಿಲ್ ಕ್ಯಾನ್ ( 5 ಲೀಟರ್ ಸಾಮರ್ಥ್ಯವಿರುವುದು ) | 1 |
| 12) | ಸ್ಟೈನ್‌ಲೆಸ್ ಸ್ಟೀಲ್ ಬೇಸಿನ್ | 2 |
| 13) | ಗ್ಯಾಸ್ ಸ್ಟೌವ್ | 1 |
| 14) | ತಕ್ಕಡಿ | 1 |

ಪ್ರತಿ ಕೇಂದ್ರಕ್ಕೆ ಸರಾಸರಿಯಾಗಿ ಒಟ್ಟಾರೆ ಮೇಲಿನ ಬಾಬ್ತಿಗೆ ರೂ. 5,000-00 ( ಐದು ಸಾವಿರ ರೂಪಾಯಿಗಳು ಮಾತ್ರ ) ಗಳ ವೆಚ್ಚ ಮೀರಕೂಡದು.

---6

8) ಅಗತ್ಯವಿರುವ ಬೇಳೆ, ಎಣ್ಣೆ ತರಕಾರಿ, ಮಸಾಲೆ, ಇಂಧನ ಮತ್ತು ಇತ್ಯಾದಿಗಳಿಗಾಗಿ ಪ್ರತಿ ಮಗುವಿಗೆ ದಿನವೊಂದಕ್ಕೆ ರೂ. 1-00 ( ಒಂದು ರೂಪಾಯಿಗಳು ಮಾತ್ರ ) ಗಳನ್ನು ಮೀರದಂತೆ ವಿನಿಯೋಗಿಸಬಹುದು.

9) ಅಡಿಗೆ ಕೊಠಡಿ / ಕೇಂದ್ರಕ್ಕೆ ನೀರನ್ನು ಒದಗಿಸಲು ಅಥವಾ ನೀರಿನ ಸಂಪರ್ಕ ವ್ಯವಸ್ಥೆ (ವಾಟರ್ ಕನೆಕ್ಷನ್) ಗಾಗಿ ಕನಿಷ್ಠ 3,000, ಗರಿಷ್ಠ 8,000 ದವರೆವಿಗೂ ಸರಾಸರಿ ರೂ. 6,000 ಗಳಿಗೆ ಮೀರದಂತೆ ವೆಚ್ಚ ಮಾಡಬಹುದಾಗಿದೆ.

10) ಮಕ್ಕಳ ಬಲವರ್ಧನೆಗಾಗಿ ಕಬ್ಬಿಣದ ಅಂಶವಿರುವ ಮಾತ್ರೆಗಳು, ಡಿ ವರ್ಮಿಂಗ್ + ವಿಟಮಿನ್ ಎ ಮಾತ್ರೆಗಳ ಮೇಲೆ ಪ್ರತಿ ಮಗುವಿಗೆ ಪ್ರತಿ ತಿಂಗಳಿಗೆ ರೂ. 0.92 ( ತೊಂಭತ್ತೆರಡು ಪೈಸೆ) ಗಳನ್ನು ವಿನಿಯೋಗಿಸಲು ಅನುಮತಿ ನೀಡಿದ್ದು ಈ ವೆಚ್ಚವನ್ನು ಮಂಜೂರು ಮಾಡಿರುವ ಆಯವ್ಯಯದ ಮಿತಿಯೊಳಗೆ ವೆಚ್ಚ ಭರಿಸತಕ್ಕದ್ದು.

11) ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಠಿಕ ನೆರವು ನೀಡುವ ರಾಷ್ಟ್ರೀಯ ಕಾರ್ಯಕ್ರಮ ಯೋಜನೆಯಡಿ ಕೇಂದ್ರ ಸರ್ಕಾರವು ಮಂಜೂರು ಮಾಡುವ ಆಹಾರ ಧಾನ್ಯವನ್ನು (ಅಕ್ಕಿ / ಗೋಧಿ) ಮತ್ತು ಸಾಗಾಣಿಕೆ ವೆಚ್ಚವನ್ನು ಈ ಉದ್ದೇಶಕ್ಕಾಗಿ ಬಳಸಿಕೊಳ್ಳತಕ್ಕದ್ದು.

12) ಈ ಯೋಜನೆಯಡಿ ಖರೀದಿಸಬೇಕಾದ ವಸ್ತುಗಳನ್ನು ಖರೀದಿಸುವಲ್ಲಿ ಪ್ರಚಲಿತ ಜಾರಿಯಲ್ಲಿರುವ ಎಲ್ಲಾ ಖರೀದಿ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸತಕ್ಕದ್ದು.

13) ಈ ಕಾರ್ಯಕ್ರಮದ ಸಮರ್ಪಕ ಅನುಷ್ಠಾನದ ಬಗ್ಗೆ ವಿವರವಾದ ಮಾರ್ಗಸೂಚಿಗಳನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಹೊರಡಿಸುವರು.

ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಅನಧಿಕೃತ ಟಿಪ್ಪಣಿ ಸಂಖ್ಯೆ : ಆ ಇ 912 ವೆಚ್ಚ - 8: 2001, ದಿನಾಂಕ : 4.9.2001 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

( ಕೆ. ಶ್ರೀಕಂಠೇಶ್ವರ್ )
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಶಿಕ್ಷಣ ಇಲಾಖೆ ( ಯೋಜನೆ )

ಇವರಿಗೆ :

1) ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು.
2) ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3) ಸಹನಿರ್ದೇಶಕರು (ಮಧ್ಯಾಹ್ನ ಉಪಹಾರ ಯೋಜನೆ) ಸಾರ್ವಜನಿಕ ಶಿಕ್ಷಣ ಇಲಾಖೆ, ಕೆಂಪೇಗೌಡ ರಸ್ತೆ, ಬೆಂಗಳೂರು.
4) ಪ್ರಧಾನ ಕಾರ್ಯದರ್ಶಿಗಳು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು - 1.